### ಏನಾದರೂ ಮಾಡಿ

ಆತ: ಡಾಕ್ಟ್ರೇ, ನನ್ನ ಮಗ ಯಾವಾಗಲೂ ಉಗುರು ಕಚ್ಚುತ್ತಿರುತ್ತಾನೆ. ಏನಾದರೂ ಮಾಡಿ.

ಡಾಕ್ಟರು: ಚಿಂತೆ ಬಿಡಿ, ಉಗುರು ಕಚ್ಚದ ಹಾಗೆ ಎಲ್ಲ ಹಲ್ಲು ಕಿತ್ತು ಬಿಡ್ತೀನಿ.

### ತುಂಬ ವೀಕ್

ಬಸವ: ನಮ್ಮ ಗಣಿತ ಮೇಷ್ಟ್ರು ತುಂಬ ವೀಕ್ ಮಾರಾಯ.

ರಾಮು: ಯಾಕೋ? ಏನಾಯ್ತು?

ಬಸವ: ಅವರಿಗೆ ಸೊನ್ನೆ ಮುಂದಿನ ಅಂಕಿಗಳೇ ಗೊತ್ತಿಲ್ಲ ನೋಡು. ನನಗೆ ಮತ್ತೆ ಸೊನ್ನೆ ಅಂಕವನ್ನೇ ಕೊಟ್ಟಿದ್ದಾರೆ.

### ಎರಡೂ ಒಂದೇ!

ಯುವಕ: ಹುಡುಗಿಯರು ಮತ್ತು ಬಸ್ಸು ಎರಡೂ ಒಂದೇ. ಒಂದು ಹೋದರೆ ಮತ್ತೊಂದು ಬರುತ್ತದೆ.

ಯುವತಿ: ಹುಡುಗರು ಮತ್ತು ಆಟೋರಿಕ್ಷಾ ಎರಡೂ ಒಂದೇ. ಒಬ್ಬರನ್ನು ಕರೆದರೆ ಐವರು ಬರುತ್ತಾರೆ.

### ಮಾತನಾಡದ ಸ್ವಾಮಿ

ಆತ: ನಮ್ಮ ಸ್ವಾಮೀಜಿಗಳನ್ನು ನೀವೀಗ ಮಾತನಾಡಿಸಲು ಸಾಧ್ಯವಿಲ್ಲ. ಸ್ನಾನ ಮಾಡಿದ ಮೇಲೆ ಅವರು ಮರುದಿನ ಬೆಳಗಿನವರೆಗೆ ಯಾರ ಜೊತೆಯೂ ಮಾತನಾಡುವುದಿಲ್ಲ.

ಈತ: ಹಾಗಾದರೆ ಅವರು ಸ್ನಾನ ಮಾಡುವುದು ಯಾವಾಗ?

ಆತ: ರಾತ್ರಿ ಪ್ರಸಾದ ಸೇವಿಸಿದ ಮೇಲೆ.

### ಒದ್ದಾಡ್ತಾ ಇದೀನಿ

ಪ್ರಯಾಣಿಕ: ಏನಯ್ಯಾ ಡ್ರೈವರ್, ಇಲ್ಲೀ ತನಕ ಚಕ್ಕಡಿ ಹೋದಂಗೆ ಗಾಡಿ ಓಡಿಸ್ತಿದ್ದೆ. ಈಗ ಒಮ್ಮೆಲೇ ಸ್ಪೀಡಾಗಿ ಓಡಿಸ್ತಿದ್ದೀಯಲ್ಲ ಏನಾಗಿದೆ ನಿನಗೆ?

ಡ್ರೈವರ್: ತಣ್ಣಗಿರಯ್ಯಾ, ನಾನೇ ಬ್ರೇಕ್ ಫೇಲಾಗಿ ಒದ್ದಾಡ್ತಾ ಇದೀನಿ. ನಿಂದೇನು?

### ಕಾರಣ

ಡಾಕ್ಟರ್: ರೀ, ನನಗೇನೋ ವಯಸ್ಸಾತು. ಆಪರೇಶನ್ ಮಾಡೋವಾಗ ಕೈ ನಡುಗುತ್ತೆ. ಹರೇದವ್ರು ನೀವ್ಯಾಕ್ರೀ ನಡುಗ್ತಾ ಇದೀರಿ.

ರೋಗಿ: ಸರ್, ನೀವು ಕೊಡೋ ಬಿಲ್ ನೆನಸ್ಕೊಂಡು ಮೈ ನಡಗ್ತಾ ಇದೆ.

### ಬಿಸಿ ಮಾಡ್ತಿದಾರೆ

ಗ್ರಾಹಕ: ಏನಯ್ಯಾ, ಆರ್ಡರ್ ಮಾಡಿ ಎಷ್ಟೊತ್ತಾಯ್ತು ಇನ್ನೂ ದೋಸೆ ರೆಡಿಯಾಗಿಲ್ವಾ?

ಮಾಲೀಕ: ನಿನ್ನೆನೇ ರೆಡಿಯಾಗಿದೆ ಸರ್. ಬಿಸಿ ಮಾಡ್ತಿದಾರೆ, ಸ್ವಲ್ಪ ತಡೀರಿ.



ಭಾವು ಪತ್ತಾರ್

### ಚಮಚ ತನ್ನಿ!

ಮರುದಿನ ಯುಗಾದಿ ಹಬ್ಬವಿತ್ತು. ಮಂತ್ರಿಗಳ ಹೆಂಡತಿ 'ರೀ, ಸಂಜೆ ಮನೆಗೆ ಬರುವಾಗ ಒಂದಿಷ್ಟು ಚಮಚ ತನ್ನಿ' ಅಂದಳು.

ಸಂಜೆ ಮನೆಗೆ ಬಂದಾಗ ಹೆಂಡತಿ 'ಎಲ್ರೀ, ಚಮಚ ಹೇಳಿದ್ನಲ್ಲ?' ಕೇಳಿದಳು.

ಹೊರಗೆ ಕಟ್ಟೆ ಮೇಲೆ ನೋಡು ಅಂದ್ರು ಮಂತ್ರಿಗಳು. ಹೊರಗಡೆ ನೋಡಿ ಬಂದ ಹೆಂಡತಿ 'ಇದೇನ್ರೀ ಜನರನ್ನ ಕರ್ಕೊಂಡು ಬಂದೀರಲ' ಅಂದ್ಲು.

ಚಮಚಾಗಳನ್ನ... ಹೇಳಿದ್ದೆಯಲ್ಲೇ ಅಂದ್ರು ಶಾಂತವಾಗಿ ಮಂತ್ರೀಜಿ.

■ (ಸಂಗ್ರಹ) ಪ್ರಕಾಶ ಎಸ್., ಮನ್ನಂಗಿ

ಓಂ ✝ ☪ ಸರ್ವೇಜನಾಃ ಸುಖಿನೋ ಭವಂತು ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ.
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.